

ಕೊರಿಯನ್ ಪಾಪ್‌ನ ಹ್ರಸ್ವರೂಪ 'ಕೆ–ಪಾಪ್'. ಶಾಲೆಗಳ ಕಂದಮ್ಮಗಳು, ಕಾಲೇಜು ಕಣ್ಮಣಿಗಳು ಕಿವಿಗೆ ಸಿಕ್ಕಿಸಿಕೊಂಡ ಹ್ಯಾಂಡ್ಸ್‌ಫ್ರೀಗಳಲ್ಲಿ ಈಗ ಜನಪ್ರಿಯವಾಗಿರುವ ಸಂಗೀತ ಪ್ರಕಾರವಿದು. ಅದರಲ್ಲೂ ಕೋವಿಡ್ ಕಾಲದಲ್ಲಿ ಇದರ ಸೌಂಡು ಜಾಸ್ತಿಯಾದದ್ದು.

ಕೋವಿಡ್ ಕಾಲದಲ್ಲಿ ಮನರಂಜನಾ ಉದ್ಯಮದ ಕದ ಮುಚ್ಚಿತು. ಚಿತ್ರಮಂದಿರಗಳಿಗೆ ಹೋಗುವ ಪರಿಪಾಠ ಅನಿವಾರ್ಯವಾಗಿ ನಿಂತಿತು. ಲಾಕ್‌ಡೌನ್‌ನಲ್ಲಿ ಮಕ್ಕಳು ದೊಡ್ಡವರಂತಾಗಿಬಿಟ್ಟರು! ಅಡುಗೆಮನೆಗೆ ಇಳಿದರು. ಯೂಟ್ಯೂಬ್ ವಿಡಿಯೊಗಳನ್ನು ನೋಡುತ್ತಾ ಹೊಸರುಚಿಗಳನ್ನು ಮಾಡಿ ಉಂಡರು. ಹಾಗೆ ಮಾಡಿದ ತಿನಿಸುಗಳ ವಿಡಿಯೊಗಳನ್ನು ಚಿತ್ರಿಸಿ, ಆಪ್ತೇಷ್ಟರಲ್ಲಿ ಹಂಚಿಕೊಂಡರು. ಇನ್ನೂ ಒಂದು ಹೆಜ್ಜೆ ಮುಂದೆಹೋಗಿ ಯೂಟ್ಯೂಬ್ ಚಾನೆಲ್‌ಗಳನ್ನು ಮಾಡಿಕೊಂಡು, ಅದಕ್ಕೆ ಅಪ್‌ಲೋಡ್ ಮಾಡಿ, ಎಷ್ಟು ಜನ ನೋಡಿದರು/ಇಷ್ಟಪಟ್ಟರು ಎಂದು ಲೆಕ್ಕ ಹಾಕುತ್ತಾ ತಲೆ ಕೆರೆದುಕೊಂಡರು. ಇಷ್ಟದ ಸಿನಿಮಾಗಳನ್ನು ಒಟಿಟಿಗಳಲ್ಲಿ ಹುಡುಕಿ ಹುಡುಕಿ ನೋಡಿದರು. ಹಾಗೆಯೇ ಸಂಗೀತದ ಒಲವೂ ಗರಿಗೆದರಿತು.

ಆನ್‌ಲೈನ್ ಕ್ಲಾಸ್‌ಗಳಿಗೆ ಮೊಬೈಲ್ ಬೇಕೇಬೇಕು. ಆ್ಯಂಡ್ರಾಯ್ಡ್ ಮೊಬೈಲ್ ಇದ್ದಮೇಲೆ ಸಾಮಾಜಿಕ ಜಾಲತಾಣಗಳ ಪಾತಾಳಗರಡಿಗೆ ಮನಸ್ಸು ಸಿಲುಕದೆ ಇದ್ದೀತೆ? 'ಕೆ–ಪಾಪ್' ಶಾಲಾವಲಯಗಳ ಮಕ್ಕಳಲ್ಲಿ ಹೆಚ್ಚು ಜನಪ್ರಿಯವಾದದ್ದೇ ಕೋವಿಡ್ ಅಲೆಗಳು ಎದ್ದಾಗ. ಅದಕ್ಕೂ ಮೊದಲು ಅದು ಅಷ್ಟು ದೊಡ್ಡ ಪ್ರಮಾಣದಲ್ಲಿ ಇರಲಿಲ್ಲ.

ಮಣಿಪುರದಲ್ಲಿ 'ರೆವೊಲ್ಯೂಷನರಿ ಪೀಪಲ್ಸ್ ಫ್ರಂಟ್' ಎಂಬ ಪ್ರತ್ಯೇಕತಾವಾದಿಗಳ ಗುಂಪೊಂದು 2000ದ ದಶಕದಲ್ಲಿ ಭಾರತದ ಎಲ್ಲ ಬಗೆಯ ಮನರಂಜನೆಯನ್ನೂ ತಂತಾನೇ ನಿಷೇಧಿಸಿಕೊಂಡಿತು. ಹಿಂದಿ ಪಾರಮ್ಯದ ಭಾಷೆಯ ಮನರಂಜನೆಯು 'ಊಳಿಗಮಾನ್ಯ ಪದ್ಧತಿ'ಯ ಬೇರುಗಳನ್ನು ಉಳಿಸಿಕೊಂಡಿದೆ ಎನ್ನುವುದು ಆ ಗುಂಪಿನವರ ನಂಬಿಕೆಯಾಗಿತ್ತು. ಈ ನಿಷೇಧಕ್ಕೆ ಪ್ರತಿಕ್ರಿಯೆ–ಪರ್ಯಾಯ ಎನ್ನುವಂತೆ

